
ಚಿತ್ರ: ಆದಿತ್ಯ ಜಿ. ತಿಳಿ

ಅಕಾಡೆಮಿಯ ಮಾಜಿ ಅಧ್ಯಕ್ಷ ದಯಾನಂದ ಕತ್ತಲ್‌ಸಾರ್ ಹೇಳುವ ಪ್ರಕಾರ, 'ದೈವಗಳಿಗೆ ನೇಮ ಅಥವಾ ಕೋಲದ ಆರಾಧನೆಯನ್ನು ಸಲ್ಲಿಸುವುದೆಂದರೆ, ಅದು ರೂಪಿಲ್ಲದ ದೈವಕ್ಕೆ ರೂಪವೊಂದನ್ನು ಭಾವಿಸಿಕೊಂಡು, ಸಿರಿ ಸಿಂಗಾರದ ಅಲಂಕಾರ ಮಾಡಿ, ಆಹಾರ ಅರ್ಪಿಸಿ ಸಂತೃಪ್ತಿ ಪಡಿಸುವ ಪದ್ಧತಿ'. ರಾಜನ್ ದೈವಗಳಿಗೆ ನೀಡುವ ನೇಮ ಮತ್ತು ಪರಿವಾರ ದೈವಗಳಿಗೆ ನೀಡುವ ಕೋಲಸೇವೆಯ ನಡುವೆ ಸಣ್ಣ ವ್ಯತ್ಯಾಸಗಳಿದ್ದರೂ, ಬಹುತೇಕ ಆಚರಣೆಗಳು ಸಮಾನವಾಗಿವೆ.

ನೇಮದ ದಿನದಂದು ದೈವಸ್ಥಾನದ ಬಳಿ ಧ್ವಜಾರೋಹಣ ನಡೆಸಿ, ದೀಪದ ಬಲಿ ನಡೆಸಿದ ನಂತರ ಗೋಧೂಳಿ ಮುಹೂರ್ತದಲ್ಲಿ ದೈವದ ಭಂಡಾರವು (ಓಲಗ) ನೇಮ ನಡೆಯುವ ಅಂಗಣಕ್ಕೆ ಆಗಮಿಸುವುದು. ಅಲ್ಲಿ ನೇಮ ಕಟ್ಟುವ ಪಾತ್ರಿಯು ದೈವದ ಮಹಿಮೆ ವಿವರಿಸುವ ಪಾಡ್ದನ ಹೇಳುತ್ತಾನೆ. ಆ ಪಾಡ್ದನವು ಮುಕ್ತಾಯವಾಗುತ್ತಿದ್ದಂತೆಯೇ ಆತನಿಗೆ ಎಣ್ಣೆಬೂಳ್ಯವನ್ನು (ಎಣ್ಣೆ ವೀಳ್ಯ) ಪ್ರದಾನ ಮಾಡುತ್ತಾರೆ. ಈ ಎಣ್ಣೆಯನ್ನು ಬಳಸಿಕೊಂಡು ಆತ ಬಣ್ಣದ ಅಲಂಕಾರವನ್ನು ಮಾಡಿಕೊಂಡು, ಆಯಾ ದೈವಕ್ಕೆ ನಿಗದಿ ಮಾಡಿದ ವೇಷಭೂಷಣಗಳನ್ನು ಕಟ್ಟಿಕೊಂಡು ದೈವಸ್ಥಾನದ ಬಳಿಗೆ ಬರುತ್ತಾನೆ. ಎಣ್ಣೆವೀಳ್ಯ ಪ್ರದಾನ ಮಾಡಿದ ಬಳಿಕ ದೈವದ ಆವೇಶವು ಆರಂಭವಾಗಿ, ಅದು ಮುಕ್ತಾಯವಾಗುವ (ಪಿರಿಬೂಳ್ಯ) ಸಂದರ್ಭದಲ್ಲಿ ಕೊಡುವ ವೀಳ್ಯದವರೆಗೆ 16 ರೀತಿಯ ಕ್ರಮಗಳನ್ನು ಅನುಸರಿಸಲಾಗುತ್ತದೆ. ಅಲಂಕೃತ ದೈವವು ಗಗ್ಗರವನ್ನು (ಕಾಲಿಗೆ ಕಟ್ಟುವ ಆಭರಣವನ್ನು) ಧರಿಸುವುದು ಮಹತ್ವದ ಘಟ್ಟವೆಂದು ಭಾವಿಸಲಾಗುತ್ತದೆ. ಗಗ್ಗರ ಧಾರಣೆ, ಹಲವು ರೀತಿಯ ನರ್ತನಗಳು, ನುಡಿ ಹೇಳುವಿಕೆ, ಆಹಾರ ಸ್ವೀಕಾರ... ಹೀಗೆ ಒಂದೊಂದೇ ಕ್ರಮಗಳನ್ನು ಅನುಸರಿಸುತ್ತಾ ನೇಮವು ಸಾಗುತ್ತದೆ. ಪ್ರತಿಯೊಂದು ದೈವಕ್ಕೂ ಆರಾಧನಾ ವಿಧಾನ ವಿಭಿನ್ನವಾಗಿದೆ.

ಅಲಂಕಾರ ಮಾಡಿಕೊಳ್ಳುವ ಸಂದರ್ಭದಲ್ಲಿ ಮುಖದ ಅಲಂಕಾರಕ್ಕೆ ಬಣ್ಣಗಾರಿಕೆ ಎನ್ನಬಹುದು. ಆ ಬಣ್ಣಗಾರಿಕೆಯಲ್ಲೂ ಹಲವು ವಿಧಗಳಿವೆ. ಅವುಗಳೆಂದರೆ:

1. ಪ್ರಾಣಿವರ್ಗದ ದೈವಗಳ ಮುಖವರ್ಣಿಕೆ
2. ಅರಸು ದೈವಗಳ ಮುಖವರ್ಣಿಕೆ
3. ಹೆಣ್ಣು ದೈವಗಳ ಮುಖವರ್ಣಿಕೆ
4. ಶ್ರಮಿಕ ವರ್ಗದ ದೈವಗಳ ಮುಖವರ್ಣಿಕೆ
5. ಮಾನವ ವರ್ಗದ ದೈವಗಳ ಮುಖವರ್ಣಿಕೆ

ಬೇರೆ ಬೇರೆ ವರ್ಗದ ದೈವಗಳ ಬಣ್ಣಗಾರಿಕೆಯಲ್ಲಿ ಪರಸ್ಪರ ಹೋಲುವ ಸಮಾನ ಅಂಶಗಳಿವೆ. ಪಂಜುರ್ಲಿ ದೈವದ ಮುಖವರ್ಣಿಕೆಯಲ್ಲಿ ಹಂದಿಯ ಮುಖದ ಸಾಂಕೇತಿಕ ಚಿತ್ರಣವಿದೆ. ಹಳದಿ ಮತ್ತು ಕೆಂಪು ಬಣ್ಣಗಳ ಬಳಕೆಯ ಪ್ರಮಾಣ ಹೆಚ್ಚಿಗೆ ಇದೆ. ಹಂದಿಯ ಚೂಪು ಮುಖದ ಒಂದು ಸ್ಥೂಲ ಕಲ್ಪನೆಯನ್ನು ಹಣೆಯ ಬಣ್ಣಗಾರಿಕೆಯು ಮೂಡಿಸುತ್ತದೆ. ಹೊರಮುಖವಾಗಿ ಚಾಚುವ ಹಣೆಯ ಕಪ್ಪು ಕೆಂಪು ದಪ್ಪ ರೇಖೆಗಳ ಒಟ್ಟು ವಿನ್ಯಾಸವನ್ನು 'ದಾಡೆ'ಯ (ಕೋರೆ ಹಲ್ಲು) ಕೆಲಸ ಎಂದು ಕಲಾವಿದರು ಕರೆಯುತ್ತಾರೆ.

ಪಿಲಿಭೂತದ ಮುಖವರ್ಣಿಕೆಯಲ್ಲಿ ಇರುವ ಬಣ್ಣಗಳು, ರೇಖೆಗಳು, ಮುದ್ರೆಗಳು, ಚುಟ್ಟಿಗಳ ಸಾಲುಗಳು, ಸುಳಿಗಳು ಇವು ಕೆನ್ನಾಲಿಗೆಯನ್ನು ಚಾಚಿದ ಹುಲಿಯ ಮುಖವನ್ನು ಸಾಂಕೇತಿಕವಾಗಿ ಬಿಂಬಿಸುತ್ತವೆ. ಕೊಡಮಣಿತ್ತಾಯ, ನಾಗಬಿರ್ಮೆರ್, ಗಿಳಿರಾಮ, ಬಸ್ತಿನಾಯಕ, ಶಿರಾಡಿ ಭೂತ, ಪುರುಷ ಭೂತ, ಮೂಜುಲ್ನಾಯ ಭೂತ, ಉಳ್ಳಾಲ್ತಿ, ಮಲರಾಯಿ, ಆಲಿ ಭೂತ, ಕೊರಗತನಿಯ, ಲೆಕ್ಕೆಸಿರಿ, ಗುಳಿಗ – ಹೀಗೆ ಪ್ರತಿಯೊಂದು ದೈವದ ಬಣ್ಣಗಾರಿಕೆಯಲ್ಲಿಯೂ ವೈಶಿಷ್ಟ್ಯಗಳನ್ನು ಗುರುತಿಸಬಹುದು. ಕೆಂಪು, ಕಪ್ಪು ಮತ್ತು ಬಿಳಿ ಬಣ್ಣಗಳ ಹೆಚ್ಚಿನ ಪ್ರಮಾಣದ ಬಳಕೆಯನ್ನು ಕಲ್ಕುಡ ಕಲ್ಲುರ್ಟಿ ದೈವಗಳ ಬಣ್ಣಗಾರಿಕೆಯಲ್ಲಿ ಕಾಣಬಹುದು. ಕಪ್ಪು ಮತ್ತು ಬಿಳಿ ಬಣ್ಣವನ್ನು ಮಾತ್ರ ಬಳಸುವುದು ಸಾಂಪ್ರದಾಯಿಕ ಕ್ರಮವಾಗಿತ್ತು. ಕಪ್ಪು ಬಣ್ಣವನ್ನು ತಳಹದಿಯಾಗಿ ಹಾಕಿ ಅದರ ಮೇಲೆ ಮುಖಪೂರ್ತಿ ಬಿಳಿ ಚುಕ್ಕಿಗಳನ್ನು ಹಾಕುತ್ತಾರೆ. ಕಲ್ಕುಡ ಕಲ್ಲುರ್ಟಿಯ ವ್ಯಕ್ತಿತ್ವದಲ್ಲಿ ಅಡಗಿರುವ ನಿಗೂಢತೆಯನ್ನು ಈ ಬಣ್ಣಗಾರಿಕೆ ಅದ್ಭುತವಾಗಿ ಕಟ್ಟಿಕೊಡುತ್ತದೆ. ಕಪ್ಪು ಮತ್ತು ಬಿಳಿ ಬಣ್ಣವನ್ನು ಸಾಂಪ್ರದಾಯಿಕ ವಿಧಾನದಲ್ಲಿ ಕಲಾವಿದರೇ ತಯಾರಿಸುತ್ತಾರೆ.

ಕರಾವಳಿಯ ನೆಲಮೂಲದ ಧಾರ್ಮಿಕ ವಲಯವು ಈ ದೈವಾರಾಧನೆಯನ್ನು ನಂಬಿಕೊಂಡಿದೆ. ಹಾಗಾಗಿ ಎಲ್ಲ ದೇವಸ್ಥಾನಗಳಲ್ಲಿ ವಾರ್ಷಿಕ ಜಾತ್ರೆಗಳು ಆರಂಭವಾಗುವ ಸಂದರ್ಭ ಮತ್ತು ಮುಕ್ತಾಯವಾಗುವ ವೇಳೆಗೆ ದೈವಾರಾಧನೆಯು ನಡೆಯಲೇಬೇಕು. ಧಾರ್ಮಿಕ ಆಚರಣೆಗಳನ್ನು ನಿರ್ವಹಿಸುವ ಮನೆಗಳಲ್ಲಿಯೂ ಈ ಆರಾಧನಾ ಪದ್ಧತಿಯನ್ನು ಯಥಾನುಶಕ್ತಿ ನಿರ್ವಹಿಸಿಕೊಂಡು ಬರುತ್ತಾರೆ.

ದೈವಾರಾಧನೆ ಎನ್ನುವುದು ದೈವದ ನಂಬಿಕೆಯ ಪ್ರಶ್ನೆಯಷ್ಟೇ ಅಲ್ಲ, ಅದು ಸತ್ಯದ ಆರಾಧನೆಯೂ ಹೌದು. ಮನುಷ್ಯನ ಜೀವನದಲ್ಲಿ ಸತ್ಯ ಮತ್ತು ನೈತಿಕತೆ ಎಷ್ಟು ಮುಖ್ಯ ಎನ್ನುವುದನ್ನು ಈ ಆರಾಧನಾ ಸಂಸ್ಕೃತಿ ತಲೆಮಾರುಗಳಿಂದ ತಲೆಮಾರುಗಳಿಗೆ ಮನದಟ್ಟು ಮಾಡಿಸುತ್ತಿದೆ.

ಅವಿಭಕ್ತ ಕುಟುಂಬಗಳು ವಿಂಗಡವಾಗಿ ಚೆಲ್ಲಾಪಿಲ್ಲಿಯಾಗುತ್ತಿರುವ ಸಂದರ್ಭದಲ್ಲಿಯೂ ಈ ಆರಾಧನಾ ಪದ್ಧತಿಯು ಕೌಟುಂಬಿಕ ಏಕತೆಯನ್ನು ಬೆಂಬಲಿಸುತ್ತದೆ. ಆದರೆ ಈ ಆರಾಧನೆಯ ಬೆನ್ನೆಲುಬಾದ ಕೃಷಿಯನ್ನು ಉಳಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಆದಾಗ್ಯೂ ನಂಬಿಕೆಯ ಸ್ರೋತವೊಂದು ಜೀವಂತವಾಗಿದೆ. ಅದರ ಆಶಯವು ಜನಮಾನಸದಲ್ಲಿ ಸಾಕಾರಗೊಳ್ಳುವುದೇ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ.

ಪ್ರತಿಕ್ರಿಯಿಸಿ: feedback@sudha.co.in